**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 8984/2022**

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಲಕ್ಷ್ಮಿ ಹೆಚ್.ಎಲ್.

ಗಂಡನ ಹೆಸರು :- ಹರೀಶ್ ಸಿ

ವಯಸ್ಸು :- 21 ವರ್ಷ

ಉದ್ಯೋಗ :- ಖಾಸಗಿ ಕೆಲಸ

ವಾಸ :- ಹಂಗರಹಳ್ಳಿ

**ಸಾಕ್ಷಿಗೆ ದಿಃ 08.04.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

31.05.2022 ರಂದು ಬೆಳಿಗ್ಗೆ 8 ಗಂಟೆ ಸಮಯದಲ್ಲಿ ಆರೋಪಿ 1 ಮತ್ತು 2 ಕೋಳಿ ನಾಯಿ ಅವರ ಮನೆ ಹತ್ತಿರ ಹೋಗಿ ಕೆರೆದು ಗುಂಡಿ ತೆಗೆದ ಬಗ್ಗೆ ಜಗಳ ಮಾಡುತ್ತಿದ್ದು ಆ ಸಮಯದಲ್ಲಿ ಏಕೆ ಏನು ಎಂಥ ಕೇಳಿದ್ದಕ್ಕೆ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದು ಸಗಣಿಯನ್ನು ತೆಗೆದುಕೊಂಡು ಎರಚಾಡಿರುತ್ತಾರೆ. ನಂತರ ಅವರ ಮಗನನ್ನು ಪೋನ ಮಾಡಿ ಕರೆಸಿ ಅವರು ಬಂದು ಹೆಲ್ಮಟ್ ನಿಂದ ನನ್ನ ತಾಯಿಯ ತಲೆಗೆ ಹೊಡೆದಿರುತ್ತಾರೆ. ನಂತರ ಅಲ್ಲಿಯೇ ಬಿದ್ದಿದ್ದ ರೀಪಿಜ್ ಪಟ್ಟಿಯಿಂದ ಬೆನ್ನಿಗೆ ತೊಡೆಗೆ ಅದು ಮುರಿಯುವವರಗೆ ಹೊಡೆದಿರುತ್ತಾರೆ ಮತ್ತು ನನ್ನ ತಾಯಿಯನ್ನು ಕಾಲಿನಿಂದ ತುಳಿದಿರುತ್ತಾರೆ ನಾನು ವಿಡಿಯೋ ಮಾಡುತ್ತಿದ್ದಾಗ ನನ್ನ ಕೈಯನ್ನು ಹಿಡಿದು ಎಳೆದು ನನಗೆ ಅವಾಚ್ಯ ಶಬ್ದಗಳಿಂದ ಬೈದು ವಿಡಿಯೋ ಮಾಡುತ್ತಿಯಾ ಏನೇ ಎಂದು ಕೇಳಿ ನನ್ನ ಬೆನ್ನಿಗೆ ಎಡ ರಟ್ಟೆಗೆ ಹೊಡೆದಿರುತ್ತಾರೆ. ನಂತರ ಅವುಗಳನ್ನು ಅಲ್ಲಿಯೇ ಬಿಸಾಡಿ ಹೋಗಿರುತ್ತಾರೆ. ನಂತರ ನನ್ನ ತಂದೆ ಮತ್ತು ಅಣ್ಣ ಬಂದ ಬಳಿಕ ನನ್ನ ತಾಯಿಯನ್ನು ಕುಣಿಗಲ್ ಸರಕಾರಿ ಆಸ್ಪತ್ರೆಗೆ 11 ಗಂಟೆ ಸಮಯದಲ್ಲಿ ಕರೆದುಕೊಂಡು ಹೋಗಿರತ್ತಾರೆ. ನನ್ನತಾಯಿ ಚಿಕಿತ್ಸೆ ಪಡೆದುಕೊಂಡು ಸುಧಾರಿಸುವಷ್ಟರಲ್ಲಿ ಸಮಯವಾಗಿದ್ದು ರಾತ್ರಿ 9 ಗಂಟೆಗೆ ಪೋಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ.

ನಂತರ ಪೋಲಿಸರು ಕೊರ್ಟ್ ಗೆ ಕಳುಹಿಸಿರುತ್ತಾರೆ. ದೂರನ್ನು ನೀಡಿದ ಮಾರನೇ ಪೋಲಿಸರು ಬೆಳಿಗ್ಗೆ 9.30 ರಿಂದ 10 ಗಂಟೆ ಸವಯದಲ್ಲಿ ಬಂದಿದ್ದು ಆ ಸಮಯದಲ್ಲಿ ನಾನು ನನ್ನ ಅಣ್ಣ ಮತ್ತು ಚಾ.ಸಾ. 5 ಮತ್ತು 6 ಇದ್ದರು ಪೋಲಿಸರು ರೀಫಿಜ್ ಪಟ್ಟಿ ಹೆಲ್ಮಟ್ 1 ಡ್ರೆಸ್ ಅನ್ನು ಜಪ್ತು ಮಾಡಿಕೊಂಡು ಹೋಗಿರುತ್ತಾರೆ. ದೂರನ್ನು ಈ ಗ ನೋಡುತ್ತಿದ್ದು ಅದನ್ನು ನಿ.ಪಿ 1 ಎಂದು ಸಹಿಯನ್ನು ನಿ.ಪಿ 1(ಎ) ಎಂದು ಗುರುತಿಸಲಾಯಿತು. ಪಂಚನಾವೆಯನ್ನು ನಿ.ಪಿ 2 ಎಂದು ಸಹಿಯನ್ನು ನಿ.ಪಿ 2(ಎ) ಎಂದು ಗುರುತಿಸಲಾಯಿತು.

ದಿಃ 15.06.2022 ರಂದು ನ್ಯಾಯಾಲಯದ ಮುಂದೆ ಬಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿರುತ್ತೇನೆ. ನಮ್ಮನ್ನು ಆರೋಪಿತರು ಹೊಡೆಯಲು ಉಪಯೋಗಿಸಿದ ವಸ್ತುಗಳನ್ನು ಈಗ ನೋಡುತ್ತಿದ್ದು ಅದನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು. ಆರೋಪಿತರನ್ನು ನಾನು ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಆರೋಪಿ 1 ಮಾತ್ರ ಇದ್ದು 2 ಮತ್ತು 3 ಹಾಜರು ಇರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ಆರೋಪಿ 1 ಮತ್ತು 2 ನನ್ನ ತಾಯಿಯ ಜುಟ್ಟನ್ನು ಹಿಡಿದು ಎಳೆದಾಡಿ ಮೈಕೈ ಮೇಲೆ ಕೈಯಿಂದ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ನಾನು ಬಿಡಿಸಿಕೊಳ್ಳಲು ಹೋದಾಗ ಆರೋಪಿ 1 ಮತ್ತು 2 ನನಗೂ ಮೈಕೈ ಮೇಲೆ ಕೈಯಿಂದ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿ. ನನ್ನತಾಯಿಗೆ ಆರೋಪಿ 3 ಸೊಂಟಕ್ಕೆ ಮತ್ತು ಎಡ ಬುಜಕ್ಕೆ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದರೆ ಸರಿ. ನಾನು ಹಾಕಿಕೊಂಡಿದ್ದ ಡ್ರೆಸ್ ಅನ್ನು ಹಿಡಿದು ಎಳೆದಾಡಿ ಹಾಕಿದುಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿ ನನಗೆ ಪ್ರಜ್ಞೆ ತಪ್ಪಿತ್ತು ಎಂದು ಹೇಳುತ್ತಾರೆ. ನನ್ನ ಅಣ್ಣನ ಸ್ನೇಹಿತರು ಬಂದು ಜಗಳ ಬಿಡಿಸಿರುತ್ತಾರೆ ಆ ಸಮಯದಲ್ಲಿ ಆರೊಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದೆ ಇರುವ ದೊಣೆಯಿಂದ ಹೊಡೆದಿದ್ದು ರೀಫಿಜ್ ಪಟ್ಟಿಯಿಂದ ಅಲ್ಲವೆಂದರೆ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ರೋಲ್‌ನಿಂದ ಹೊಡೆದಿದ್ದು ಅದರ ಹೆಸರು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರಃ ಜೆ.ಹೆಚ್. ವಕೀಲರಿಂದಃ**

ನಾನು ದ್ವಿತಿಯ ಪಿಯುಸಿ ವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 2020 ರಲ್ಲಿ ನನ್ನ ಪಿಯುಸಿಮುಗಿದಿರುತ್ತದೆ. ನಾನು ಹುಟ್ಟಿದಾಗಿನಿಂದ ಹಂಗರಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನ್ನ ತಂದೆ ತಾಯಿ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಾರೆ ಅದೇರೀತಿ ವ್ಯವಸಾಯ ಸಹ ಮಾಡುತ್ತಾರೆ. ಬೆಳಿಗ್ಗೆ 7.20 ರಿಂದ ಸಂಜೆ 7 ಗಂಟೆ ವರೆಗೆ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಾರೆ. ಗಲಾಟೆ ಆದ ದಿನ ನನ್ನ ತಾಯಿಗೆ ಹುಷಾರ ಇಲ್ಲದ ಕಾರಣ ಗಾರ್ಮೆಂಟ್ ಕೆಲಸಕ್ಕೆ ಹೋಗಿರುವುದಿಲ್ಲ. ಗಲಾಟೆ ಆದ ನನ್ನ ತಾಯಿ ರಜೆ ಪಡೆದಿದ್ದರು. ಗಾರ್ಮೆಂಟ್ ಅಂಗಡಿ ದೊಡ್ಡಗೊಲ್ಲರಹಟ್ಟಿ ಬೆಂಗಳೂರಿನಲ್ಲಿರುತ್ತದೆ.

ಚಾ.ಸಾ. 2 ನನ್ನ ತಾಯಿ. ಚಾ.ಸಾ. 3 ಮತ್ತು 4 ನಮ್ಮ ಸಂಬಂಧಿಕರು ಚಾ.ಸಾ. 5 ನನ್ನ ಅಣ್ಣ. ಚಾ.ಸಾ. 3 ಮತ್ತು 4 ಮಾಗಡಿ ನಿವಾಸಿಗಳಾಗಿರುತ್ತಾರೆ. ನನ್ನ ಅಣ್ಣ ಡಿಗ್ರಿ ವ್ಯಾಸಂಗ ಮಾಡಿರುತ್ತಾರೆ. ಗಲಾಟೆ ಆದ ಸಮಯದಲ್ಲಿ ನನ್ನ ಅಣ್ಣನ ವ್ಯಾಸಂಗ ಮುಗಿದಿತ್ತು. ನಾವು 9 ಗಂಟೆ ಸಮಯದಲ್ಲಿ ದೂರನ್ನು ನೀಡಿರುತ್ತೇವೆ. ಹು.ದುರ್ಗ ದಲ್ಲಿ ಸರಕಾರಿ ಆಸ್ಪತ್ರೆ ಮತ್ತು ಪೋಲಿಸ ಠಾಣೆ ಇದೆ ಎಂದರೆ ಸರಿ. ನಮ್ಮ ಊರಿನಿಂದ ಹು.ದುರ್ಗ ದಲ್ಲಿ ಸರಕಾರಿ ಆಸ್ಪತ್ರೆ ಮತ್ತು ಪೋಲಿಸ ಠಾಣೆ 8-9 ಕೀ ಮೀ ದೂರದಲ್ಲಿದೆ. ಮೊದಲು ಕುಣಿಗಲ್ ಸರಕಾರಿ ಆಸ್ಪತ್ರೆಗೆ 11 ಗಂಟೆಗೆ ಹೋಗಿರುತ್ತೇವೆ. ದೂರನ್ನು ನಾನೇ ಕೈಯಿಂದ ಬೆರೆದಿರುತ್ತೇನೆ. ದೂರಿನಲ್ಲಿ ನನ್ನ ತಾಯಿಯನ್ನು ಅಂಬುಲೇನ್ಸ್ ನಲ್ಲಿ ಕರೆದುಕೊಂಡ ಹೋದ ಬಗ್ಗೆ ನನಗೆ ನೆನಪಿಲ್ಲವೆಂದು ಹೇಳುತ್ತಾರೆ.

ದೂರಿನಲ್ಲಿ ಬರೆದ ವಿಚಾರವನ್ನು ಈ ದಿನ ನನಗೆ ಹೇಳಲು ಆಗುತ್ತಿಲ್ಲವೆಂದರೆ ಸರಿಯಲ್ಲ. ಕುಣಿಗಲ್ ಸರಕಾರಿ ಆಸ್ಪತ್ರೆ ನಮ್ಮ ಊರಿನಿಂದ 20 ಕೀ ಮೀ ದೂರವಾಗುತ್ತದೆ. ನಮ್ಮ ಊರಿನಿಂದ ಕುಣಿಗಲ್ ಗೆ ಬರಲು 30 ನಿಮಿಷ ಬೇಕಾಗುತ್ತದೆ. ನಮ್ಮ ಊರಿನಿಂದ ಹು.ದುರ್ಗ ಆಸ್ಪತ್ರೆ ಹೋಗಲು 15 ನಿಮಿಷ ಬೇಕಾಗುತ್ತದೆ. ಗಲಾಟೆ ಬೆಳಿಗ್ಗೆ 6.30 ರಿಂದ 9 ರವರೆಗೆ ಆಗಿರುತ್ತದೆ. ಗಲಾಟೆ 8 ರಿಂದ 9 ಗಂಟೆ ವರೆಗೆ ಆಗಿದ್ದು 6.30 ಗಂಟೆಯಿಂದ ಆರೋಪಿತರು ಬೈಯುತ್ತಿದ್ದರು ಎಂದು ಹೇಳುತ್ತಾರೆ. ಈ ವಿಚಾರವನ್ನು ದೂರಿನಲ್ಲಿ ಬರೆಸಿರುವುದಿಲ್ಲ. ಈ ವಿಚಾರವನ್ನು ದೂರಿನಲ್ಲಿ ಬರೆಯಲು ತೊಂದರೆ ಇರಲಿಲ್ಲವೆಂದು ಹೇಳುತ್ತಾರೆ.

ನಮ್ಮ ಕುಟುಂಬಕ್ಕೂ ಆರೋಪಿತರ ಕುಟುಂಬಗಳ ನಡುವೆ ಹಿಂದಿನಿಂದಲೂ ದ್ವೇಷ ಇತ್ತು ಎಂದರೆ ಸರಿ. ಆರೋಪಿ 1 ಮತ್ತು 2 ಮಾತ್ರ ಹಂದರಹಳ್ಳಿಯಲ್ಲಿ ವಾಸ ಮಾಡುತ್ತಿದ್ದಾರೆ. ಆರೋಪಿ 3 ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದಾರೆ. ಆರೋಪಿ 1 ಮತ್ತು

2 ಅವರಿಗೆ ವಯಸ್ಸಾಗಿರುತ್ತದೆ ಎಂದರೆ ಸರಿ. ಆರೋಪಿ 2 ಅವರಿಗೆ ಸ್ಟ್ರೋಕ್ ಆಗಿದ್ದು ಮಾತನಾಡಲು ಆಗುವುದಿಲ್ಲವೆಂದರೆ ಸಾಕ್ಷಿ 6 ತಿಂಗಳಿನಿಂದ ಮಾತ್ರ ಸ್ಟ್ರೋಕ್ ಆಗಿದ್ದು ಈ ಮೊದಲು ಚನ್ನಾಗಿದ್ದರು ಬಿ.ಪಿ ಶುಗರ್ ಇತ್ತು ಎಂದು ಹೇಳುತ್ತಾರೆ. ಆರೋಪಿ 2 ಅವರಿಗೆ ಸ್ಟ್ರೋಕ್ ಆಗಿರುವ ಕಾರಣ ನಡೆಯಲು ಆಗುವುದಿಲ್ಲ ಮತ್ತು ಬಿ.ಪಿ ಶುಗರ್ ಇದ್ದಿರುವ ವಿಚಾರ ಗೊತ್ತಿದ್ದರು ಸಹ ಸುಳ್ಳು ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ನಾವು ದೂರನ್ನು ನೀಡುವಾಗ ಅವರು ಚನ್ನಾಗಿದ್ದರು ಈಗ ಸ್ಟ್ರೋಕ್ ಆಗಿರಬಬಹುದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನನಗೆ ವ್ಯವಸಾಯದ ಕೆಲಸಗಳು ಸ್ವಲ್ಪ ಮಟ್ಟಿಗೆ ಗೊತ್ತು ಎಂದು ಹೇಳುತ್ತಾರೆ. ರೀಫಿಜ್ ಪಟ್ಟಿಗೂ ಮತ್ತು ದೊಣ್ಣೆಗೂ ವ್ಯತ್ಯಾಸ ನನಗೆ ಗೊತ್ತು. ದೂರಿನಲ್ಲಿ ದೊಣ್ಣೆಯ ಬಗ್ಗೆ ಹೇಳಿರುತ್ತೇನೆ. ದೊಣ್ಣೆ ಯಾವ ಜಾತಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವಂಹತ ದೊಣ್ಣೆಗಳನ್ನು ಸಾಮಾನ್ಯವಾಗಿ ಎಲ್ಲರೂ ಮನೆಯ ಮುಂದೆ ನೆಟ್ಟಿರುತ್ತಾರೆ ಎಂದರೆ ಸರಿ. ಪೋಲಿಸರು ಬಂದಾಗ ಮು. ಮಾ. ಗಳನ್ನು ನೀವೆ ನೀಡಿರುತ್ತೀರಿ ಎಂದರೆ ಸಾಕ್ಷಿ ನಾನೇಎತ್ತಿಟ್ಟಿದೆ ಎಂದು ಹೇಳುತ್ತಾರೆ. ದೂರಿನಲ್ಲಿ ಜಗಳ ನಮ್ಮ ಮನೆಯ ಮುಂದೆ ಆಗಿರುತ್ತದೆ ಎಂದು ಬರೆಸಿರುತ್ತೇನೆ. ನಮ್ಮ ಮನೆಯ ಮುಂದೆ ಸಾರ್ವಜನಿಕ ರಸ್ತೆ ಇದ್ದು ಸುಮಾರು ಜನ ಓಡಾಡುತ್ತಾರೆ ಎಂದರೆ ಸರಿ. ಜಗಳದ ಸಮಯದಲ್ಲಿ 20 ಜನ ಸೇರಿದ್ದರು. ದೂರಿನಲ್ಲಿ 20 ಜನ ಸೇರಿದ ಬಗ್ಗೆ ಮತ್ತು ಅವರ ಹೆಸರುಗಳನ್ನು ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಇರಲಿಲ್ಲವೆಂದು ಹೇಳುತ್ತಾರೆ. ವಿಡಿಯೋ ವನ್ನು ನಾನು ಪೋಲಿಸರಿಗೆ ಕಳುಹಿಸಿರುತ್ತೇನೆ. ವಿಡಿಯೋ ವನ್ನು ಸಿಡಿ ಮಾಡಿ ಪೋಲಿಸರಿಗೆ ನೀಡಲು ತೊಂದರೆ ಇರಲಿಲ್ಲ. ನನ್ನ ತಾಯಿಗೆ ಹೊಡೆಯುವಾಗ ನಾನು ಸಾಕ್ಷಿಗೆಂದು ವಿಡಿಯೋ ಮಾಡುತ್ತಿದ್ದೆ.

ಗಲಾಟೆ ಆದ ದಿನ ಆರೋಪಿ 3 ಊರಿನಲ್ಲಿ ಇರಲಿಲ್ಲವೆಂದರೆ ಸಾಕ್ಷಿ ಪೋನ ಮಾಡಿ ಕರೆಸಿದ್ದಾರೆಂದು ಹೇಳುತ್ತಾರೆ. ನಮ್ಮ ಊರಿನಿಂದ ಬೆಂಗಳೂರಿಗೆ 1 ಗಂಟೆಯ ಅವಧಿ ಇರುತ್ತದೆ. ನಮ್ಮ ಊರಿನಿಂದ ಬೆಂಗಳೂರಿಗೆ ಎಷ್ಟು ಕೀ ಮಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಊರಿನಿಂದ ಬೆಂಗಳೂರು 70 ಕೀ ಮಿ ದೂರ ಇದ್ದು ನಾನು ಹೇಳಿದಂತೆ ಅರ್ಧ ಗಂರೆ ಒಂದು ಗಂಟೆಯಲ್ಲಿ ಬಂದು ಹೊಡೆಯಲು ಆಗುವುದಿಲ್ಲವೆಂದರೆ ಸರಿಯಲ್ಲ. ವಿಡಿಯೋವನ್ನು ಎಷ್ಟು ಗಂಟೆಗೆ ಮಾಡಲು ಆರಂಬಿಸಿದ್ದೆ ಎಂದು ನನಗೆ ನೆನಪಿಲ್ಲ. ನಾನು ಹೇಳಿದ ರೀತಿ ಆರೋಪಿ 3 ಬಂದು ನನ್ನನ್ನು ಎಳೆದಾಡಿ ಹೊಡೆದು ಬಟ್ಟೆ ಹರಿದು ಹಾಕಿಲ್ಲವೆಂದರೆ ಸರಿಯಲ್ಲ. ಆರೋಪಿತರು ನನಗೆ ಜೀವ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ. ಆರೋಪಿತರು ನಮಗೆ

ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹೊಡೆದಿಲ್ಲವೆಂದರೆ ಸರಿಯಲ್ಲ.

ದೂರಿನ ಮೊದಲ ಪುಟ ಮತ್ತು 2 ನೇಪುಟದ ಅರ್ದನಿಂದ ಬರೆ ಬರೆವಣಿಗೆ ಇದ್ದು ವ್ಯಸ್ಯಾತ ಇರುತ್ತದೆ ಎಂದರೆ ಸರಿಯಲ್ಲ. ದೂರಿಗೆ ನನ್ನ ಸಹಿಯನ್ನು ಪಡೆದಿದ್ದು ದೂರಿನಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ದೂರನ್ನು ನಾನೇ ಬರೆದಿದ್ದು ಮೊದಲು 2 -3 ಬಾರಿ ಬರೆದಿದ್ದು ಸದು ಸರಿಯಿಲ್ಲವೆಂದು ಹೇಳಿರುತ್ತಾರೆ. ನಾನು ಕೊನೆಗೆ ಬಾರಿ ದೂರನ್ನು ಪಡೆದು ಸಹಿಯನ್ನು ಪಡೆದಿರುತ್ತಾರೆ. ಮೊದಲು ಬರೆದ ದೂರನ್ನು ನಾನೇ ಹರಿದು ಹಾಕಿರುತ್ತೇನೆ. ನಾನು ಯಾವುದೇ ದೂರನ್ನು ಹರಿದು ಹಾಕಿಲ್ಲ ಆರೋಪಿತರ ಮೇಲಿರುವ ದ್ವೇಷದಿಂದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಲ್ಮಟ್ ನಂತಹ ಮು. ಮಾ. ಗಳು ಎಲ್ಲಿ ಬೇಕಾದರೂ ಸಿಗುತ್ತೆವೆ ಎಂದರೆ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಹೆಲ್ಮಟ್ ನಿಂದಲೇಹೊಡೆದಿರುತ್ತಾರೆಂದು ಹೇಳುತ್ತಾರೆ.

ಹೆಲ್ಮಟ್ಅನ್ನು ಪೋಲಿಸರಿಗೆ ನಾನೇನೀಡಿರುತ್ತೇನೆ. ಹೇಲ್ಮಟ್ ಮೇಲೆ ವಿಶಿಷ್ಟ ಗುರುತನ್ನು ಹಾಕಿ ಸಹಿ ಮಾಡಿರುವುದಿಲ್ಲ. ಪಂಚನಾಮೆಗೆ ಸಹಿ ಮಾಡಿರುತ್ತೇನೆ. ದೊಣ್ಣೆಯ ಮೇಲೆ ಬಟ್ಟೆಯ ಮೇಲೆ ಸಹಿ ಹಾಕಿರುವುದಿಲ್ಲ. ದೂಣ್ಣೆಯನ್ನು ಈಗಲೇ ಮುಗಿದುಕೊಂಡು ಬಂದಂತೆ ಇರುತ್ತದೆ ಎಂದರೆ ಸರಿಯಲ್ಲ. ದೂರಿನಲ್ಲಿ ಪಿಂಕ್ ಕಲರ್ ಡ್ರಸ್ ಇರುತ್ತದೆ ಎಂದು ಹೇಳಿರುತ್ತೇನೆ. ನನ್ನ ಡ್ರಸ್ ಮುಂಭಾಗದಲ್ಲಿ ಹಾರಿದು ಹೋಗಿರುತ್ತದೆ. ಬಟ್ಟೆ ಸುಮಾರು 2 ಕಡೆ ಹರಿದಿರುತ್ತೆದೆ. ನನ್ನ ಬಟ್ಟೆ 2 ಕಡೆ ಬಲಗಡೆ ಹರಿದಿರುತ್ತೆದೆ. ಗುಲಾಬಿ ಬಣ್ಣ ಮತ್ತು ಮೆಜಂತಾ ಬಣ್ಣದ ವ್ಯತ್ಯಾಸ ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಬಟ್ಟೆ ಮೆಜಂತಾ ಬಣ್ಣದ್ದು ಇರುತ್ತದೆ ಎಂದರೆ ಮತ್ತು ಅದು ನನಗೆ ಸೇರಿದ್ದು ಇರುವುದಿಲ್ಲವೆಂದರೆ ಸರಿಯಲ್ಲ. ಗಲಾಟೆಯಲ್ಲಿ ನನಗೆ ರಕ್ತ ಗಾಯಗಳು ಆಗಿರುತ್ತದೆ. ರಕ್ತ ಗಾಯ ಆಗಿರುವುದನ್ನು ದೂರಿನಲ್ಲಿ ಬರೆದಿರುವುದಿಲ್ಲ ವೈದ್ಯರಿಗೆ ತಿಳಿಸಿರುತ್ತೇನೆ.

ನನಗೆ ಪ್ರಜ್ಞೆ ಯಾವಾಗ ತಪ್ಪಿತ್ತು ಮತ್ತು ಪ್ರಜ್ಞೆ ಯಾವಾಗ ಬಂತು ಎಂದು ನನಗೆ ಗೊತ್ತಿಲ್ಲ. ಈ ವಿಷಯವನ್ನು ದೂರಿನಲ್ಲಿ ಹೇಳಿರುತ್ತೇನೆ. ದೂರಿನಲ್ಲಿ ನಾನು ಪ್ರಜ್ಞೆ ತಪ್ಪಿರುವ ಬಗ್ಗೆ ಬರೆದಿದ್ದು ಈಗ ಇರುವುದಿಲ್ಲ ನಾನು ನೀಡಿದ ದೂರು ನಿ.ಪಿ 1 ಆಗಿರುವುದಿಲ್ಲವೆಂದರೆ ಸರಿಯಲ್ಲ. ದೂರನ್ನು ನೀಡಿದ ಬಳಿಕ ಪೋಲಿಸರು ನನ್ನ ಪುರವಣಿ ಹೇಳಿಕೆಯನ್ನು ಪಡೆದಿರುವುದಿಲ್ಲ. ದೂರಿನ ಅಂಶಗಳು ಮತ್ತು ನ್ಯಾಯಾಧೀಶ ಮುಂದೆ ಹೇಳಿದ ಅಂಶಗಳು 2 ಸತ್ಯವಾಗಿರುತ್ತದೆ. ದೂರಿನಲ್ಲಿ ನೀಡಿದ ಅಂಶಗಳನ್ನೇ ನ್ಯಾಯಾಧೀಶರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುತ್ತೇನೆ.

ದಿಃ 31.05.2022 ರಂದು ಪೋಲಿಸರು ಸ್ಥಳ ಮಹಜರ್ ಮಾಡಿರುತ್ತಾರೆ. ಮಹಜರ್ ನಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಮಹಜರ್ ಗೆ ಯಾರು ಯಾರು ಯಾವ ಭಾಷೆಯಲ್ಲಿ ಸಹಿ ಮಾಡಿದ್ದಾರೆಂದು ಹೇಳಲು ಬರುತ್ತದೆ. ಸ್ಥಳದ ಮಹಜರ್ ಚಕ್ಕುಬಂದಿ ನಮ್ಮ ಮನೆಯ ಪೂರ್ವಕ್ಕೆ ಆರೋಪಿತರ ಮನೆ ಇರುತ್ತದೆ ಪಶ್ಚಿಮಕ್ಕೆ ನಮ್ಮ ಅಜ್ಜಿಯ ಮನೆ ಇರುತ್ತದೆ ಉತ್ತರಕ್ಕೆ ನಮ್ಮ ಅಜ್ಜಿಯ ಮನೆ ಮತ್ತು ದಕ್ಷಿಣಕ್ಕೆ ಬೇರೆಯವರ ಮನೆ ಇರುತ್ತದೆ. ಮಹಜರಗೆ ನನ್ನ ದೊಡ್ಡಪ್ಪ ಕನ್ನಡದಲ್ಲಿ ಮಾಡಿರುತ್ತಾರೆ. ಪಂಚನಾಮೆಗೆ ನಾಗರಾಜು ಮತ್ತು ಸಂತೋಷ ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುವುದಿಲ್ಲ. ಹೆಲ್ಮೆಟ್ ಪುಡಿ ಪುಡಿ ಆಗಿರುತ್ತದೆ. ಪೋಲಿಸರು ಕೈಗೆ ಸಿಕ್ಕಿದ್ದ ಹೆಲ್ಮೆಟ್‌ನು ಜಪ್ತು ಮಾಡಿಕೊಂಡಿರುತ್ತಾರೆ. ಹೆಲ್ಮೆಟ್ ಚುರುಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ. ಬಟ್ಟೆ ಹರಿಯುುವುದು ಮತ್ತು ಕತ್ತರಿಸುವ ವ್ಯತ್ಯಾಸ ನನಗೆ ಗೊತ್ತು. ಬಟ್ಟೆಯನ್ನು ತಕ್ಕ ಹಿಡಿಯಲಾಗಿದೆ. ನ್ಯಾಯಾಲಯದ ಮುಂದೆ ಇರುವ ಮು. ಮಾ. ಬಟ್ಟೆಯನ್ನು ಕಟ್ ಮಾಡಲಾಗಿದೆ ಎಂದರೆ ಸರಿಯಲ್ಲ. ಬಟ್ಟೆಯ ಮೇಲೆ ಬ್ರಾಂಡೆಡ್ ಹೆಸರು ಇರಲಿಲ್ಲ. ಮು. ಮಾ. ಬ್ಯಾಂಡ್ ಹೆಸರು ಇದೆ ಎಂದರೆ ಸರಿ. ಪ್ರಜ್ಞೆ ತಪ್ಪಿದ ನಂತರ ಏನು ಆಯಿತು ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಅಣ್ಣ ಅಮೃತ, ಸಾಗರ ಆಸ್ಪತ್ರೆಗೆ ಹೋಗಿರುತ್ತೇವೆ.

ವೈದ್ಯರೇ ಪರೀಕ್ಷೆ ಮಾಡಿ ವಿಚಾರಿಸಿ ಬರೆದುಕೊಂಡಿರುತ್ತಾರೆ. ಗಲಾಟೆ ಎಷ್ಟು ಗಂಟೆಗೆ ಆಗಿದೆ ಎಂದು ನಾನೇ ಹೇಳಿ ಬರೆಸಿರುತ್ತೇನೆ. ಗಲಾಟೆಗೆ ಯಾರು ಕಾರಣವೆಂದು ಯಾರು ನಿಮಗೆ ಯಾವ ವಸ್ತುವಿನ ಹೂಡೆದಿರುತ್ತಾರೆಂದು ನಾನು ಬರೆಸಿರುತ್ತೇವೆ. ಸಾಗರ ಮತ್ತು ಅಮೃತ ಹೊರತು ಪಡಿಸಿ ನನ್ನ ಜೊತೆ ಯಾರು ಬಂದಿರುವುದಿಲ್ಲ. ನ್ಯಾಯಾಧೀಶರ ಮುಂದೆ ಆರೋಪಿತರ ವಿರುದ್ದ ದ್ವೇಷದಿಂದ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರು ಸುಳ್ಳು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದಿಗೂ ಮು. ಮಾ. ಗಳಿಗೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ನನಾು ಹೇಳಿದ ರೀತಿ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಹೊಡೆದಿಲ್ಲ ಆರೋಪಿ 3 ನನ್ನ ಮಾನಭಂಗ ಮಾಡಲು ಪ್ರಯತ್ನ ಮಾಡಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ್ಠ ಹಿಂದಿನ ದ್ವೇಷದಿಂದ ಸುಳ್ಳು ಕೇಸನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಒಳರೋಗಿ ಆಗಿ ಚಿಕಿತ್ಸೆ ಪಡೆದಿರುವುದಿಲ್ಲ. ನನ್ನ ತಾಯಿಗೆ ಆರೋಪಿ 1 ರಿಂದ 3 ಹೊಡೆದಿರುವುದಾಗಿ ಹೇಳಿರುವುದು ಸುಳ್ಳು ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲವೆಂದರೆ ಸರಿಯಲ್ಲ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**